# ಹಳದಿ ಮಲ್ಲಿಗೆ

**ಈ ಬಳ್ಳಿ ಸುಮಾರು 6 ರಿಂದ 20 ಮೀಟರ್‌ವರೆಗೆ ಬೆಳೆಯುತ್ತದೆ. ಬಿಟ್ಟರೆ ಹೂವು ಗಿಡದಲ್ಲಿ ಎರಡು ದಿವಸ ಇರುತ್ತದೆ. ಕಿತ್ತರೆ ಸಂಜೆ ವೇಳೆಗೇ ಬಾಡಿ ಹೋಗುತ್ತದೆ.**

■ ಚಿತ್ರ ಬರಹ:
**ಟಿ.ಆರ್.ಮಂಜುನಾಥ**



ಗಾಳಿ ಬೀಸಿದಾಗ ಬಳುಕುವ ಲತೆಯನ್ನು ನೋಡುವುದೇ ಚೇತೋಹಾರಿ ಅನುಭವ. ಹೂವು ಸೂಸುವ ಪರಿಮಳದ್ದೇ ಒಂದು ವಿಶೇಷ. ಮನುಷ್ಯನ ಮನಸ್ಸನ್ನು ಚೇತೋಹಾರಿಯಾಗಿಸುವ ಶಕ್ತಿ ಅದಕ್ಕಿದೆ. ಅದರಲ್ಲೂ ಮಲ್ಲಿಗೆ ಬಳ್ಳಿಗಳು ಮನಸ್ಸಿಗೆ ಮುದ ನೀಡುವಲ್ಲಿ ಹೆಸರುವಾಸಿ.

ಮಲ್ಲಿಗೆಯಲ್ಲಿ ವಿವಿಧ ಜಾತಿಯ ಮಲ್ಲಿಗೆಗಳಿವೆ. ಭಾರತದ ಮಲ್ಲಿಗೆ ಜಗತ್ತಿನಾದ್ಯಂತ ಹೆಸರುವಾಸಿ. ಅದು ಬರೀ ಬಿಳಿ ಬಣ್ಣದ್ದು. ಆದರೆ ಅಮೆರಿಕ, ಇಟಲಿ ಮುಂತಾದ ದೇಶಗಳು ಹಳದಿ ಮಲ್ಲಿಗೆ ಬೆಳೆಯುತ್ತವೆ. ಇದು ನಮ್ಮ ದೇಶದಲ್ಲಿ ಬೆಳೆಯುವ ಪುನ್ನಾಗ ಹೂವಿನಂತೆಯೇ ಕಾಣಿಸುತ್ತದೆ. ಆದರೆ ಪುನ್ನಾಗ ಹೂವಿಗೆ ಪರಿಮಳವಿಲ್ಲ. ಹಳದಿ ಮಲ್ಲಿಗೆಗೆ ಪರಿಮಳವಿದೆ.

ಈ ಹಳದಿ ಮಲ್ಲಿಗೆ ಜೆಲ್ಸೆಮಿಯಾಸಿಯ ಸಸ್ಯ ಕುಟುಂಬಕ್ಕೆ ಸೇರಿದೆ. ಅಮೆರಿಕಾದಿಂದ ಸ್ನೇಹಿತರು ತಂದು ಕೊಟ್ಟ, ನೋಡಲು ಆಕರ್ಷಕವಾಗಿದ್ದ ಈ ಹಳದಿ ಮಲ್ಲಿಗೆ ಬಳ್ಳಿಯನ್ನು ನನ್ನ ಮನೆಯ ಮುಂಭಾಗದಲ್ಲಿ ನೆಟ್ಟೆ. ಚಿಗುರಲು ಸ್ವಲ್ಪ ಸಮಯ ಹಿಡಿದರೂ ನಂತರ ಚೆನ್ನಾಗಿ ಹಬ್ಬಲು ಪ್ರಾರಂಭಿಸಿದ ಈ ಬಳ್ಳಿಯನ್ನು ಮನೆಯ ಮೇಲ್ಛಾವಣಿಯ ಕಬ್ಬಿಣದ ಕಟಕಟೆಗೆ ಹಬ್ಬಿಸಿದೆ. ಈಗ ಅದು ಚೆನ್ನಾಗಿ ಹಬ್ಬಿ ವರ್ಷದ ಹೆಚ್ಚಿನ ದಿನಗಳಲ್ಲಿ ಹೂ ಬಿಡುತ್ತಿದೆ. ಇದು ಬೆಂಗಳೂರಿನಲ್ಲಿರುವ ಏಕೈಕ ಹಳದಿ ಮಲ್ಲಿಗೆ ಗಿಡ ಇರಬೇಕು ಎನ್ನುವುದು ನನ್ನ ಅನುಮಾನ.

ಈ ಬಳ್ಳಿ ಸುಮಾರು 6 ರಿಂದ 20 ಮೀಟರ್‌ವರೆಗೆ ಬೆಳೆಯುತ್ತದೆ. ಬಿಟ್ಟರೆ ಹೂವು ಗಿಡದಲ್ಲಿ ಎರಡು ದಿವಸ ಇರುತ್ತದೆ. ಕಿತ್ತರೆ ಸಂಜೆಗೆ ಬಾಡಿ ಹೋಗುತ್ತದೆ. ಈ ಮಲ್ಲಿಗೆಯ ಪರಿಮಳ ಅಷ್ಟೊಂದು ತೀಕ್ಷ್ಣವಾಗಿಲ್ಲ. ಗಿಡದ ಆಸುಪಾಸಿನಲ್ಲಿ ಹೋದರೆ ಮಾತ್ರ ಪರಿಮಳ ಗೊತ್ತಾಗುತ್ತದೆ.

ಈ ಬಳ್ಳಿ ಒಂದು ಔಷಧೀಯ ಸಸ್ಯವೂ ಹೌದು. ಇದರ ಬೇರನ್ನು ಔಷಧಿಯಾಗಿ ಸಿಡುಬು, ಕಿವಿನೋವು, ಟಾನ್ಸಿಲ್ ತೊಂದರೆಗಳು, ಅನ್ನನಾಳದ ತೊಂದರೆಗಳು, ಕ್ಯಾನ್ಸರ್ ಔಷಧಿ, ಹಲ್ಲುನೋವು, ಸಂಧಿವಾತಕ್ಕೆ ಉಪಯೋಗಿಸುತ್ತಾರೆ. ಇದರ ಹೂವಿನಿಂದ ಮಾಡಿದ ಟೀ ಸೇವಿಸಿದರೆ ಉಸಿರಾಟದ ತೊಂದರೆ, ಕಫ ಕಡಿಮೆಯಾಗುತ್ತದೆ. ಆದರೆ ಈ ಸಸ್ಯದ ಎಲೆ ಮತ್ತು ಹೂವು ವಿಷಕಾರಿ ಆಗಿರುವುದರಿಂದ ಎಲೆ ಮತ್ತು ಹೂವನ್ನು ಹಾಗೆಯೇ ಬಾಯಿಗೆ ಹಾಕಿಕೊಳ್ಳಬಾರದು.